## ಅನುಬಂಧಗಳು

### ಕನ್ನಡ ಬಾವುಟ

೧

ಕನ್ನಡನಾಡು ಎಚ್ಚೆತ್ತು ಕೂಡಿಕೊಳ್ಳುತ್ತಿರುವ ದೊಡ್ಡ ಸಡಗರದಲ್ಲಿ ಕನ್ನಡನಾಡಿನ ಹೆಮ್ಮೆಯನ್ನು ಹಾಡಿರುವ ಕವಿಗಳಿಂದ ಆಯ್ದು ತಿರುಳೊಂದನ್ನು ಹಂಚಬೇಕೆಂಬ ಬಯಕೆ ಬಹು ಕಾಲದಿಂದ ಕಡೆದು ಕುದಿಯುತ್ತಿತ್ತು. ಕನ್ನಡ ತಾಯ ಪಾದದಲ್ಲಿ ಹಿಂದಿನ ಹಿರಿಯ ಕವಿಗಳೂ ಈಗಿನ ಕವಿಗಳೂ ಒಪ್ಪಿಸಿದ ಹೂವುಗಳನ್ನು ಬಾಚಿ ತೆಗೆದು, ಮೂವತ್ತು ವರ್ಷಗಳಿಂದ ನನ್ನ ಎದೆಯಲ್ಲಿ ತುಂಬಿ ಚಿಮ್ಮುತ್ತಿದ್ದುವುಗಳನ್ನು ಇಲ್ಲಿ ದಂಡೆಗಟ್ಟಿದ್ದೇನೆ. (ನನ್ನವೂ ಕೆಲವು ಹೂವನ್ನು ನನ್ನೊಡನೆ ಈ ಆಸೆಯನ್ನು ಕಾರ್ಯರೂಪಕ್ಕೆ ತಂದ ನನ್ನ ಕೆಳೆಯರು ಇದರಲ್ಲಿ ಸೇರಿಸಿದ್ದಾರೆ. ಅದು ಅವರ ಪ್ರೀತಿ.) ತಾಯಡಿಯ ಹೂವುಗಳಿವು; ನಾನು ನಾರು: ಕನ್ನಡದ ಸತ್ತ್ವವೂ ತಿರುಳೂ ಪೋಣಿಕೆಯ ಕಣ್ಣು. ಕನ್ನಡಿಗರ, ಅದರಲ್ಲೂ ಮಕ್ಕಳ, ಹೆಣ್ಣುಮಕ್ಕಳ, ಒಕ್ಕಲುಮಕ್ಕಳ ಮೆಚ್ಚುಗೆಯೇ ನಾನು ಎದಿರುನೋಡುವ ಫಲ. ಅವರಲ್ಲೆಲ್ಲಾ ಕನ್ನಡದ ಹೆಮ್ಮೆ ಹರಡಲಿ. ಅವರಿಂದ ಕನ್ನಡ ಬೆಳಗಲಿ.

೭ನೆಯ ಶತಮಾನದಿಂದ ೨೦ನೆಯ ಶತಮಾನದ ಇಂದಿನವರೆಗೆ ಕನ್ನಡ ಬೆಳೆಯನ್ನು (೧) ಶಾಸನಗಳು, (೨) ಪೂರ್ವ ಸಾಹಿತ್ಯ, (೩) ನಾಡ ಪದಗಳು, (೪) ಇಂದಿನ ಹೊಸಕವಿತೆ–ಈ ನಾಲ್ಕು ತೆನೆಗಳಲ್ಲಿ ತೋರಿಸಿದ್ದೇನೆ. ಕಾಲಕಾಲದ ಭಾಷೆಯ ಮಾರ್ಪಾಟುಗಳು, ಛಂದಸ್ಸಿನ ಬಗೆ ಬಗೆಯ ಕುಣಿತ, ಕನ್ನಡ ನಾಡಿನ ಸೊಬಗು, ಹೃದಯ, ಧರ್ಮಗಳು, ಮಹಾವ್ಯಕ್ತಿಗಳು, ಜೀವನಗುರಿಗಳು, ಬೇರೆ ಬೇರೆ ಪ್ರಾಂತ ಪ್ರೇಮಗಳು–ಒಂದು ಮಾತಿನಲ್ಲಿ, ಹಿಂದಿನ ಮಹತ್ತ್ವದ ಸಂಸ್ಕಾರ ಮತ್ತು ಸಂಸ್ಕೃತಿ, ಇಂದಿನ ಮಹತ್ತ್ವದ ಧ್ಯೇಯ ಮತ್ತು ಯೋಜನೆಗಳು, ನಾಡ ನಾಡಿಯ ಮಿಡಿತ–ನನಗೆ ತಿಳಿದಂತೆ ಯಾವ ಯಾವುದು ಕನ್ನಡ ಬಾವುಟದಡಿಯಲ್ಲಿ ಹೊಮ್ಮಿದ ಎರಡು ಸಾವಿರ ವರ್ಷದ ಜೀವಾಳವೋ ಅದನ್ನೇ ತೆನೆಗಳಾಗಿ ಆಯ್ದು ತೆಕ್ಕೆಮಾಡಿ ಕನ್ನಡಿಗರ ಕೈಗೆ ಒಪ್ಪಿಸಿದ್ದೇನೆ. ಇದರಲ್ಲಿ ಹೆಸರು ಹೇಳಬಹುದಾದ ಪ್ರತಿಯೊಬ್ಬ ಕನ್ನಡಕವಿಯೂ ಬಂದಿರುವನೆಂದಾಗಲಿ, ಬಂದಿರುವ ಕವಿಯ, ಇಲ್ಲ, ಕಾವ್ಯದ ಉತ್ತಮ ಭಾಗವನ್ನೇ ಎಲ್ಲ ಕಡೆಯೂ ಆಯ್ದಿದೆಯೆಂದಾಗಲಿ ಹೇಳುವುದಕ್ಕಿಲ್ಲ. ಈ ವರ್ಷದ ಪರಿಷತ್ತಿನ ವಸಂತೋತ್ಸವದ ಹೊತ್ತಿಗೆ ಸಿದ್ಧಪಡಿಸುವ ಆತುರದಿಂದಲೂ ಕಡಮೆ ತಿಳಿವಳಿಕೆಯ ದೋಷದಿಂದಲೂ ಬಗೆಬಗೆಯ ಕುಂದುಕೊರತೆಗಳುಂಟೆಂಬುದನ್ನು ಬಲ್ಲೆ. ಅವನ್ನು ತಿದ್ದಿ ದಾರಿತೋರಬೇಕೆಂದು ಕನ್ನಡ ಪ್ರೇಮಿಗಳಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಈ ಸಂಗ್ರಹ ಕಾರ್ಯದಲ್ಲಿ ನೆರವಾದ ನನ್ನ ಶಿಷ್ಯರು ಶ್ರೀ ವಿ. ಸೀತಾರಾಮಯ್ಯನವರನ್ನೂ ಶ್ರೀ ಕೆ.ವಿ. ರಾಘವಾಚಾರ್ಯರನ್ನೂ ಎಂದೆಂದೂ ಸಂತೋಷದಿಂದ ನೆನೆಯುತ್ತೇನೆ. ಅವರಿಲ್ಲದೆ ಇದು ನನ್ನ ಮನಸ್ಸಿನಲ್ಲಿಯೇ ಉಳಿಯುತ್ತಿತ್ತು. ತಮ್ಮ ಕವಿತೆಗಳನ್ನು ಸೇರಿಸಿಕೊಳ್ಳುವುದಕ್ಕೆ ಒಪ್ಪಿಗೆ ಕೊಟ್ಟ ಕವಿಗಳಿಗೂ ಚೆಲುವಾದ ಮುಖಚಿತ್ರವನ್ನು ಬರೆದುಕೊಟ್ಟ ಶ್ರೀ ಎಂ. ವಿ. ಸೀತಾರಾಮಯ್ಯನವರಿಗೂ, ಶ್ರೀಮಾನ್ ಮಹಾರಾಜರವರ ಮತ್ತು ಕನ್ನಡ ನಾಡಿನ ಚಿತ್ರದ ಪಡಿಯಚ್ಚುಗಳನ್ನು ಕೊಟ್ಟ ಮೈಸೂರು ವಿದ್ಯಾಶಾಖೆಯ ಅಧಿಕಾರಿಗಳಾದ ಶ್ರೀ ಇ.ಜಿ. ಮೆಕ್‌ಲ್ವೈನ್ ಅವರಿಗೂ, ಬೇಲೂರು ಶಿಲಾಬಾಲಿಕೆಯ ಚಿತ್ರ ಪಡಿಯಚ್ಚನ್ನು ಕೊಟ್ಟ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರಿಗೂ ರನ್ನನ್ನ ಹೆಸರಿನ ಪಡಿಯಚ್ಚನ್ನು ಕೊಟ್ಟ ಶ್ರೀ ಜಿ.ಪಿ. ರಾಜರತ್ನಂ ಅವರಿಗೂ, ಮೈಸೂರು ಶಾಸನಗಳ ಸಂಕಲನದಿಂದ ಗಂಗರಾಜ ನೀತಿಮಾರ್ಗನ ಶಾಸನದ ಚಿತ್ರವನ್ನು ಉಪಯೋಗಿಸಿಕೊಳ್ಳಲು ಅನುಮತಿ ಕೊಟ್ಟ ಡಾಕ್ಟರ್ ಎಂ.ಎಚ್. ಕೃಷ್ಣ ಅವರಿಗೂ, ನಾನು ಕೊಟ್ಟ ತೊಂದರೆಗಳನ್ನೆಲ್ಲಾ ತಾಳಿಕೊಂಡು ಒಂದು ವಾರದಲ್ಲಿ ಅಂದವಾಗಿ ಅಚ್ಚುಮಾಡಿಕೊಟ್ಟ ಬೆಂಗಳೂರು ಪ್ರೆಸ್ಸಿನವರಿಗೂ, ಇನ್ನೂ ಹಲವು ಬಗೆಯಲ್ಲಿ ನನಗೆ ನೆರವಾದ ನನ್ನ ಇತರ ಮಿತ್ರರಿಗೂ ನನ್ನ ಉತ್ತಮ ವಂದನೆಗಳನ್ನು ಸಮರ್ಪಿಸುತ್ತೇನೆ.

ಕನ್ನಡದ ಬಾವುಟ ಎಂಬ ಕವಿತೆಯ ಅಚ್ಚಿನ ವಿಷಯದಲ್ಲಿ ಒಂದು ಮಾತು: ಕನ್ನಡ ಬರವಣಿಗೆಯಲ್ಲಿ ಈಗಿರುವ ಅಕ್ಷರ ಸಂಯೋಜನೆಯ ಕ್ರಮ ಹಲವು ದೃಷ್ಟಿಗಳಿಂದ, ಅದರಲ್ಲಿಯೂ ಮುದ್ರಣ ದೃಷ್ಟಿಯಿಂದ, ಬಲು ತೊಡಕಾದ್ದೆಂದೂ ಯಾವ ರೀತಿಯಲ್ಲಾದರೂ ಕೊಂಚಮಟ್ಟಿಗಾದರೂ ತೊಡಕು ಬಿಡಿಸಿ ಸರಳಮಾಡಬೇಕೆಂದೂ ಹಲವರು ಅಭಿಪ್ರಾಯಪಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯ ಸಮಿತಿಗೆ ವಹಿಸಿದರು. ಆ ಸಮಿತಿ ಚರ್ಚೆಗಳನ್ನು ನಡೆಸಿ ಕೆಲವು ತೀರ್ಮಾನಗಳಿಗೆ ಬಂತು. ಅದು ಸೂಚಿಸಿದ ಕೆಲವು ಮಾರ್ಪಾಟುಗಳನ್ನು ಇಲ್ಲಿ ಬಳಕೆಗೆ ತಂದಿದೆ. ಮುಖ್ಯವಾಗಿ ಮಾಡಿರುವ ಮಾರ್ಪಾಟುಗಳು ಮೂರು: (i) ದೀರ್ಘ ಚಿಹ್ನೆಯನ್ನು ಎಲ್ಲ ಕಡೆಯೂ ಒಂದೇ ರೀತಿ ಬರೆಯುವುದು–ಆ=ಅ಼, ಬಾ=ಬ಼, ಕೂ=ಕು಼; (ii)

ಒತ್ತಕ್ಷರಗಳನ್ನು ಬಿಡಿಸಿ ಪಕ್ಕದಲ್ಲಿ ಬರೆಯುವುದು–ಕನ್ನಡ=ಕನ್‌ನಡ, ಶ್ರೀ=ಶ್‌ರೀ; (iii) ಎಲ್ಲಾ ಮಹಾಪ್ರಾಣ ಚಿಹ್ನೆಗಳನ್ನೂ ಅಲ್ಪಪ್ರಾಣ ಚಿಹ್ನೆಗಳ ಹೊಕ್ಕುಳು ಸೀಳಿಯೆ ಮಾಡಿಕೊಳ್ಳುವುದು–ಛ=ಚ; ಭ=ಬ. ಈ ಸಣ್ಣ ಮಾರ್ಪಾಟುಗಳನ್ನು ತಾಳ್ಮೆಯಿಂದಲೂ ದೂರದೃಷ್ಟಿಯಿಂದಲೂ ನೋಡಿ ಎಲ್ಲರೂ ಒಪ್ಪಿಕೊಂಡು ಆದಷ್ಟು ಬೇಗ ಬಳಕೆಗೆ ತಂದರೆ ಎಳೆಯ ಮಕ್ಕಳ ಹೊರೆ. ಅಚ್ಚುಕೂಟಗಳ ತೊಡಕು ಅರ್ಧಕ್ಕರ್ಧ ಕಡಮೆಯಾಗುವುದೆಂದು ನಂಬಿದ್ದೇನೆ.

೨

ಕನ್ನಡನಾಡಿನ ಮಹಾಜನರ ಮತ್ತು ವಿದ್ಯಾಪೀಠಗಳ ದಯೆಯಿಂದ ಮೊದಲನೆಯ ಮುದ್ರಣ ಮುಗಿದುಹೋಯಿತು. ಎರಡನೆಯ ಮುದ್ರಣದಲ್ಲಿ ಹಿಂದಿನ ಉಳಿದ ಕೆಲವು ತಪ್ಪುಗಳನ್ನು ತಿದ್ದಿ, ಶ್ರೀ ಬೆಟಗೇರಿ ಕೃಷ್ಣಶರ್ಮರ ಸಂಗ್ರಹದಿಂದ ಕೆರೆಗೆ ಹಾರ ಎಂಬ ಲಾವಣಿಯನ್ನು ನಾಡ ಪದಗಳ ತೆನೆಯಲ್ಲಿಯೂ, ಶ್ರೀ ಬೆನಗಲ್ ರಾಮರಾಯರ ಕನ್ನಡಾಂಬೆಯ ಹಿರಿಮೆ ಎಂಬ ಕವಿತೆಯನ್ನು ಹೊಸ ಕವಿತೆಗಳ ತೆನೆಯಲ್ಲಿಯೂ ಸೇರಿಸಿದೆ. ಇವುಗಳನ್ನು ಸೇರಿಸಿಕೊಳ್ಳುವುದಕ್ಕೆ ಅನುಮತಿ ಇತ್ತ ಈ ಇಬ್ಬರು ಮಹನೀಯರಿಗೂ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ.

ಪರಿಷತ್ತಿನ ಅಧ್ಯಕ್ಷರೂ ಮಹಾಪೋಷಕರೂ ಆಗಿರುವ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರ ಚಿತ್ರಪಟವನ್ನು ಹೊಸದಾಗಿ ಸೇರಿಸಿದೆ. ಪಡಿಯಚ್ಚನ್ನು ಕೊಟ್ಟ ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನ ಅಧಿಕಾರಿಗಳಿಗೆ ವಂದನೆಗಳು ಸಲ್ಲಬೇಕಾಗಿವೆ.

ಈ ಮುದ್ರಣ ಮುಗಿಯುವ ಕಾಲಕ್ಕೆ ಪರಿಷತ್ತಿನ ಬೆಳ್ಳಿಯ ಹಬ್ಬದಲ್ಲಿ ಕನ್ನಡಿಗರಿಗೆಲ್ಲಾ ದರ್ಶನವಿತ್ತು "ಸಿರಿಗನ್ನಡಂ ಗೆಲ್ಗೆ" ಎಂದು ಹರಸಿದ ನಾಲುಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರೂ, ಅದಕ್ಕೆ ಮುನ್ನವೇ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರೂ ನಮ್ಮನ್ನು ಬಿಟ್ಟಗಲುವ ದುರ್ದೆಸೆ ನಮಗೊದಗಿತು. ದೈವಚಿತ್ತ. ಇಂಗ್ಲಿಷರು ಹೇಳುವಂತೆ– "ದೊರೆ ಹೋದ: ಬಹು ಕಾಲ ಬಾಳಲಿ ದೊರೆ!" ಅವರ ಆತ್ಮಶಕ್ತಿ ಕೆಲಸಮಾಡುತ್ತ ಕನ್ನಡಿಗರನ್ನು ಒಂದುಗೂಡಿಸಲಿ, ಮುಂದು ನಡೆಸಲಿ.

ಸಿರಿಗನ್ನಡಂ ಗೆಲ್ಗೆ

['ಕನ್ನಡದ ಬಾವುಟ' ಸಂಪಾದಿತ ಕೃತಿಗೆ ಬರೆದ ಮೊದಲನೆಯ ಹಾಗೂ ಎರಡನೆಯ ಮುದ್ರಣದ ಮುನ್ನುಡಿಗಳು: ೧೯೩೮, ೧೯೪೦]

## ಬಿ. ಎಂ. ಶ್ರೀಕಂಠಯ್ಯ: ಕೆಲವು ಮುಖ್ಯ ವರ್ಷಗಳು

೧೮೮೪ : ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ ಜನವರಿ ಮೂರರಂದು ಜನನ;
ಮುಂದೆ ಶ್ರೀರಂಗಪಟ್ಟಣ, ಮೈಸೂರು, ಬೆಂಗಳೂರು ಮತ್ತು ಮದ್ರಾಸ್‌ಗಳಲ್ಲಿ ಶಿಕ್ಷಣ

೧೯೦೩ : ಎಫ್.ಎ.

೧೯೦೬ : ಬಿ.ಎ.

೧೯೦೭ : ಬಿ.ಎಲ್.

೧೯೦೯ : ಎಂ.ಎ.: ಮೈಸೂರಿನಲ್ಲಿ ಇಂಗ್ಲಿಷ್ ಅಧ್ಯಾಪಕರು

೧೯೧೨(?) : *Rhetoric Notes* ಪ್ರಕಟಣೆ

೧೯೧೪ : ಇಂಗ್ಲಿಷಿನ ಅಸಿಸ್ಟೆಂಟ್ ಪ್ರೊಫೆಸರ್

೧೯೧೯ : ಇಂಗ್ಲಿಷಿನ ಜೂನಿಯರ್ ಪ್ರೊಫೆಸರ್

೧೯೨೧ : 'ಇಂಗ್ಲಿಷ್ ಗೀತಗಳು' ಪ್ರಕಟಣೆ

೧೯೨೩ : ಎರಡನೇ ದರ್ಜೆ ಇಂಗ್ಲಿಷ್ ಪ್ರೊಫೆಸರ್

೧೯೧೬ : 'ಗದಾಯುದ್ಧ ನಾಟಕಂ' ಪ್ರಕಟಣೆ

೧೯೧೬–೩೦ : ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್

೧೯೨೭ : ಗೌರವ ಕನ್ನಡ ಪ್ರಾಧ್ಯಾಪಕರು

೧೯೨೮ : ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು (ಕಲುಬುರ್ಗಿ)

೧೯೨೯ : 'ಅಶ್ವತ್ಥಾಮನ್' ಪ್ರಕಟಣೆ

೧೯೩೦ : ಮೊದಲ ದರ್ಜೆ ಇಂಗ್ಲಿಷ್ ಪ್ರೊಫೆಸರ್

೧೯೩೫ : 'ಪಾರಸಿಕರು' ಪ್ರಕಟಣೆ

೧೯೩೮ : ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಆಯ್ಕೆ; ಮೈಸೂರು ಮಹಾರಾಜರಿಂದ 'ರಾಜಸೇವಾಸಕ್ತ' ಬಿರುದು;
'ಕನ್ನಡ ನುಡಿ' ನಿಯತಕಾಲಿಕದ ಆರಂಭ.

೧೯೩೯ : ಸಾಹಿತ್ಯ ಪರಿಷತ್ತಿನಲ್ಲಿ ಅಚ್ಚುಕೂಟದ ಸ್ಥಾಪನೆ

೧೯೪೧ : 'ಸಂಭಾವನೆ' ಕನ್ನಡದ ಮೊದಲ ಸನ್ಮಾನ ಗ್ರಂಥದ ಸಮರ್ಪಣೆ

೧೯೪೨ : ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರು; ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ

೧೯೪೩ : 'ಹೊಂಗನಸುಗಳು' ಪ್ರಕಟಣೆ

೧೯೪೪ : ಧಾರವಾಡದ ಕಲಾ ಕಾಲೇಜಿನಲ್ಲಿ (ಈಗ ಜೆ.ಎಸ್.ಎಸ್. ಕಾಲೇಜು) ಪ್ರಿನ್ಸಿಪಾಲರು

೧೯೪೬ : ಧಾರವಾಡದಲ್ಲಿ ಜನವರಿ ಐದರಂದು ಮರಣ

೧೯೮೩ : 'ಶ್ರೀ ಸಾಹಿತ್ಯ' ಸಮಗ್ರ ಕೃತಿಸಂಪುಟದ ಪ್ರಕಟಣೆ

೧೯೮೪ : ಶತಮಾನೋತ್ಸವ ವರ್ಷ

## ಬಿ. ಎಂ. ಶ್ರೀಕಂಠಯ್ಯನವರ ಕೃತಿಗಳು

೧. *A Handbook of Rhetoric* (1919)

(ಇದು ಸುಮಾರು ೧೯೧೨ರಲ್ಲಿ ಪ್ರಕಟವಾದ *Rhetoric Notes* ಎಂಬುದರ ಪರಿಷ್ಕೃತ ಆವೃತ್ತಿ)

೨ ಇಂಗ್ಲಿಷ್ ಗೀತಗಳು (೧೯೨೧, ೧೯೨೬, ೧೯೫೩, ೧೯೫೯, ೧೯೬೬, ೧೯೭೮)

೩ ಗದಾಯುದ್ಧ ನಾಟಕಂ (೧೯೨೬, ೧೯೩೦, ೧೯೩೬, ೧೯೫೪, ೧೯೫೮, ೧೯೭೫, ೧೯೮೨)

೪ ಅಶ್ವತ್ಥಾಮನ್ (೧೯೨೯, ೧೯೪೧, ೧೯೫೩, ೧೯೬೮, ೧೯೭೯)

೫ ಪಾರಸಿಕರು (೧೯೩೫, ೧೯೪೯, ೧೯೮೬)

೬ ಕನ್ನಡ ಛಂದಸ್ಸಿನ ಚರಿತ್ರೆ (೧೯೩೬, ೧೯೫೫, ೧೯೬೫, ೧೯೬೯, ೧೯೭೧, ೧೯೭೫)

(‘ಕನ್ನಡ ಕೈಪಿಡಿ’ ಮೊದಲನೇ ಭಾಗದ ಎರಡನೇ ಮುದ್ರಣದಲ್ಲಿ ಸೇರಿದ ಪ್ರಕರಣ)

೭ ಕನ್ನಡ ಬಾವುಟ (೧೯೩೮, ೧೯೪೦, ೧೯೪೮, ೧೯೫೪, ೧೯೫೮, ೧೯೬೮, ೧೯೭೨, ೧೯೭೯)

(ಸಂಪಾದಿತ ಸಂಕಲನ)

೮ ಹೊಂಗನಸುಗಳು (೧೯೪೩, ೧೯೪೮, ೧೯೭೬)

೯ ಕನ್ನಡ ಸಾಹಿತ್ಯದ ಚರಿತ್ರೆ (೧೯೪೭, ೧೯೫೩, ೧೯೬೦, ೧೯೬೭, ೧೯೭೦)

(‘ಕನ್ನಡ ಕೈಪಿಡಿ’ಯ ಎರಡನೆಯ ಭಾಗ)

೧೦ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ (೧೯೪೮, ೧೯೫೧, ೧೯೬೨, ೧೯೭೦)

೧೧ ಇಸ್ಲಾಂ ಸಂಸ್ಕೃತಿ (೧೯೪೮, ೧೯೭೦)

(ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಅವರ ಗ್ರಂಥದ ಅನುವಾದ)

೧೨ ಶ್ರೀ ಸಾಹಿತ್ಯ (೧೯೮೩)

(ಸಮಗ್ರ ಕೃತಿಸಂಪುಟ) *

---

* ಪ್ರಕಟಣೆಯ ವರ್ಷಗಳು ಕೆಲವು ನಮಗೆ ದೊರಕಿಲ್ಲ; ದೊರಕಿದವಷ್ಟನ್ನು ಇಲ್ಲಿ ಕೊಟ್ಟಿದೆ.

**ಬಿ. ಎಂ. ಶ್ರೀಕಂಠಯ್ಯ**
**ವ್ಯಕ್ತಿ ಮತ್ತು ಸಾಹಿತ್ಯ ಕುರಿತ ಪುಸ್ತಕಗಳು**

೧ ಸಂಭಾವನೆ: (ಸಂ) ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೪೧, ೧೯೭೯)
೨ ಅಶ್ವತ್ಥಾಮನ್: ವಿ. ಸೀತಾರಾಮಯ್ಯ (೧೯೪೬, ೧೯೬೮, ೧೯೭೩)
೩ ಕಾಣಿಕೆ: ವಯಸ್ಕರ ಶಿಕ್ಷಣ ಸಮಿತಿ, ಮೈಸೂರು (೧೯೪೬)
೪ ಅಶ್ವತ್ಥಾಮನ್–ಒಂದು ಹಕ್ಕಿನೋಟ; ಎನ್. ಅನಂತರಂಗಾಚಾರ್ (೧೯೫೪, ೧೯೭೧)
೫ ಬಿ. ಎಂ. ಶ್ರೀಕಂಠಯ್ಯ; ಬಿ. ಶ್ರೀ. ಪಾಂಡುರಂಗರಾವ್ (೧೯೭೧)
೬ *B.M. Srikantia:* S.V. Ranganna (1972)
೭ *B.M. Srikantayya:* A.N. Moorty Rao (1974)
೮ ಬಿ.ಎಂ. ಶ್ರೀಕಂಠಯ್ಯ: ಎ.ಎನ್. ಮೂರ್ತಿರಾವ್ (೧೯೭೫)
೯ ಬಿ.ಎಂ. ಶ್ರೀಕಂಠಯ್ಯ: ಎಸ್. ಚನ್ನಪ್ಪ (೧೯೭೫)
೧೦ ಬಿ.ಎಂ.ಶ್ರೀ. ಅವರ ಬದುಕು–ಬರಹ; ಕನ್ನಡ ಸಾಹಿತ್ಯ ಪರಿಷತ್ತು (ಪ್ರಕಟಣೆಯ ವರ್ಷ ನಮೂದಾಗಿಲ್ಲ.)